ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು)

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಮಾರ್ಜಕ ಸಂಸ್ಥೆ ಮೊಹರು ಮತ್ತು ಚಿಹ್ನೆಯ ದುರುಪಯೋಗ.

990(109) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ ಮೊಹರು ಮತ್ತು ಚಿಹ್ನೆಯನ್ನು ದುರುಪಯೋಗಪಡಿಸಿಕೊಂಡು ನಕಲಿ ಗಂಧದ ಎಣ್ಣೆ ಮತ್ತು ಲೇಪನಗಳನ್ನು ಮಾರಾಟ ಮಾಡುವ ವ್ಯಾಪಕ ಜಾಲಾ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಈ ಹಿನ್ನಲೆಯಲ್ಲಿ ಯಾರನ್ನಾದರೂ ಬಂಧಿಸಲಾಗಿದೆಯೇ;

ಈ) ಹಾಗಿದ್ದಲ್ಲಿ ಬಂಧಿಸಲ್ಪಟ್ಟವರು ಯಾರು ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ತಿಪ್ಪಗೊಂಡನಹಳ್ಳಿ ಜಲಾಶಯದ ದಂಡೆಯ ಮೇಲೆ ಡಿ.ಎಲ್.ಎಫ್ ಸಂಸ್ಥೆಗೆ ವರ್ತಿ ಸಮುಚ್ಚಯ ಕಟ್ಟಲು ಅನುಮತಿ.

991(458) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ತಿಪ್ಪಗೊಂಡನಹಳ್ಳಿ ಜಲಾಶಯದ ದಂಡೆಯ ಮೇಲೆ ಡಿ.ಎಲ್.ಎಫ್, ಸಂಸ್ಥೆಗೆ ವಸತಿ ಸಮುಚ್ಚಯ ಕಟ್ಟಲು ಯಾವಾಗ ಅನುಮತಿ ನೀಡಲಾಯಿತು.

2. ಈ ವಸತಿ ಸಮುಚ್ಚಯ ನಿರ್ಮಾಣ ಕುರಿತು ಬೆಂಗಳೂರು ಜಲಮಂಡಳಿ, ಪರಿಸರವಾದಿಗಳು ನಾಡಿನ ಹಿರಿಯ ಚಿಂತಕರು ವ್ಯಕ್ತಪಡಿಸಿರುವ ಆಡ್ಡಿ ಆತಂಕ ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ, ತಿಪ್ಪಗೊಂಡನಹಳ್ಳಿ ಕೆರೆ ಯಾವುದೇ ರೀತಿಯಿಂದ ಕಲುಶಿತವಾಗದಿರಲು ಸರ್ಕಾರ ಹಿಂದೆ ನೀಡಿದ್ದ ಆದೇಶವನ್ನು ಹಿಂದಕ್ಕೆ ಪಡೆಯಲು ತೆಗೆದುಕೊಂಡ ಕ್ರಮಗಳು.

ಶ್ರೀ ವಿ. ಸೋಮಣ್ಣ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :—

1. ಸರ್ಕಾರ ದಿನಾಂಕ : 26.9.91ರ ಆದೇಶದಲ್ಲಿ ಅನುಮತಿಯನ್ನು ನೀಡಲಾಯಿತು.

2. ಹೌದು

3. ಸರ್ಕಾರದ ಪರಿಶೀಲನೆಯಲ್ಲಿದೆ.

ಪೋಲೀಸ್ ಇಲಾಖೆಯ ವನಿತ ಸಹಾಯವಾಣಿ.

993(1404) ಶ್ರೀ ವಿ. ಶಿವರಾಜ್ (ಯಲಹಂಕ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೋಲೀಸ್ ಇಲಾಖೆಯು ವನಿತಾ ಸಹಾಯವಾಣಿಯನ್ನು ಪ್ರಾರಂಭಿಸಿದ ದಿನಾಂಕ ಯಾವುದು; ಸದರಿ ವಿಬಾಗಕ್ಕೆ ಯಾವ ಯಾವ ಸೌಲಭ್ಯ ನೀಡಲಾಗಿದೆ;

ಆ) ಸದರಿ ವಿಭಾಗಕ್ಕೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಇತ್ಯರ್ಥವಾದ ಪ್ರ ಕರಣಗಳ ಸಂಖ್ಯೆ ಎಷ್ಟು;

ಇ) 1999ರ ಫೆಬ್ರವರಿ ಕೊನೆ ವಾರದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳ ವಿಲೇವಾರಿಗೆ ತೆಗೆದುಕೊಂಡ ಕ್ರಮಗಳಾವುವು; (ವಿವರ ನೀಡುವುದು)

ಈ) ಇತ್ಯರ್ಥಗೊಂಡ ಪ್ರಕರಣಗಳಲ್ಲಿ ತೊಂದರೆ ಮರುಕಳಿಸಿದಲ್ಲಿ ಯಾವ ರೀತಿಯಲ್ಲಿ ಪರಿಹಾರ ಸರ್ಕಾರ ದೊರಕಿಸಿಕೊಡುವುದು.

ಉ) ಯಾವ ಯಾವ ರೀತಿಯ ದೂರುಗಳನ್ನು ಈ ವಿಭಾಗದಲ್ಲಿ ದಾಖಲಿಸಿಕೊಳ್ಳಲಾಗುವುದು;